**OS.No**.74/2024 **PW**-1

**ದಿನಾಂಕಃ 15.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ ಶ್ರೀ. ಎ.ಎಸ್. ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

ಮೂಲ ಕ್ರಯದ ಕರಾರು ಪತ್ರವನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 1ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ 1(ಎ) ದಿಂದ (ಎಫ್ )ಎಂದು, ಅದೇ ರೀತಿ 1ನೇ ಪ್ರತಿವಾದಿ ನನ್ನ ಸಮಕ್ಷಮ ನಿಪಿ 1 ಕ್ಕೆ ಹೆಬೆಟ್ಟಿನ ಗುರುತು ಹಾಕಿರುತ್ತಾರೆ. ಸಾಕ್ಷಿ ನಿಪಿ 1ರಲ್ಲಿರುವ 1ನೇ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತುಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ 2 ರಿಂದ 4ನೇ ಪ್ರತಿವಾದಿಯರು ನನ್ನ ಸಮಕ್ಷಮ ನಿಪಿ 1ಕ್ಕೆ ಸಹಿ ಮಾಡಿರುತ್ತಾರೆ. ಸಾಕ್ಷಿ ನಿಪಿ 1ರಲ್ಲಿರುವ 2 ರಿಂದ 4ನೇ ಪ್ರತಿವಾದಿಯರ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ 2ನೇ ಪ್ರತಿವಾದಿಯ ಸಹಿಗಳನ್ನು ಕ್ರಮವಾಗಿ ನಿಪಿ 1 (ಜಿ) ದಿಂದ (ಕೆ) ಎಂದು, 3ನೇ ಪ್ರತಿವಾದಿಯ ಸಹಿಗಳನ್ನು ಕ್ರಮವಾಗಿ ನಿಪಿ 1 (ಎಲ್ ) ದಿಂದ (ಪಿ) ಎಂದು, 4ನೇ ಪ್ರತಿವಾದಿಯ ಸಹಿಗಳನ್ನು ಕ್ರಮವಾಗಿ ನಿಪಿ 1 (ಕ್ಯೂ ) ದಿಂದ (ಯು ) ಎಂದು ಗುರುತಿಸಲಾಯಿತು .

ನಿಪಿ 1ಕ್ಕೆ ಆ ದಿನ ಸಾಕ್ಷಿ ದಾರರಾಗಿ ಷಣ್ಮುಕ ಬಿನ್ ಮರಿಯಪ್ಪ ಮತ್ತು ಜಿ ಎಲ್ ರಂಗಣ್ಣ ರವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ . ಸಾಕ್ಷಿ ನಿಪಿ 1ರಲ್ಲಿರುವ ಸದರಿ ಸಾಕ್ಷಿದಾರರ ಸಹಿಗಳನ್ನು ಗುರುತಿಸಿರುತ್ತಾರೆ. ನಿಪಿ 1 ಅನ್ನು ಪಾಂಡುರಂಗ ಎನ್ನುವ ಪತ್ರ ಬರಹಗಾರರು ಬರೆದಿದ್ದು, ಆ ದಿನ ಅವರು ಸಹ ನಿಪಿ 1ಕ್ಕೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ . ಸಾಕ್ಷಿ ನಿಪಿ 1 ರಲ್ಲಿರುವ ಪಾಂಡುರಂಗ ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆರ್ ಟಿ ಸಿ ಪಹಣಿಯನ್ನು ನಿಪಿ 2 ಎಂದು, ರಶೀದಿಯನ್ನು ನಿಪಿ 3 ಎಂದು, ಋಣಭಾರ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ನಿಪಿ 4 ಎಂದು, ಲೀಗಲ್ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ 5 ಎಂದು, ಮೂರು ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ 6 ರಿಂದ 8 ಎಂದು, ನಾಲ್ಕು ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ 9 ರಿಂದ 12 ಎಂದು, ಜಾರಿಯಾಗದೇ ವಾಪಸ್ ಬಂದ ಅಂಚೆ ಲಕೋಟೆಯನ್ನು ನಿಪಿ 13 ಎಂದು, ಅದರೊಳಗಿನ ನೋಟೀಸ್ ಅನ್ನು ನಿಪಿ 13(ಎ) ಎಂದು ಗುರುತಿಸಲಾಯಿತು.

ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.